**ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ *16.03.2024* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಯು.ಎಸ್ ರವರಿಂದಃ**

. ನನ್ನ ತಂದೆ ಮರಣಹೊಂದಿದಾಗ ನಾನು 8 ನೇ ತರಗತಿ ಓದುತ್ತಿದ್ದೆ. ನನ್ನ ತಂದೆ ಶಿವಪ್ರಕಾಶ್ ಇವರಿಗೆ ನನ್ನ ಹೆಂಡತಿ ಮಕ್ಕಳನ್ನು ನೋಡಿಕೊಳ್ಳಬೇಕು ಎಂದು ಮಾತು ತೆಗೆದುಕೊಂಡಿದ್ದರಿಂದ ಅವರನ್ನು ನಮ್ಮನ್ನು ನೋಡಿಕೊಳ್ಳುತ್ತಿದ್ದರು ಎಂದರೆ ನನ್ನ ತಂದೆ ಹಣವನ್ನು ಕೊಟ್ಟಿದ್ದರಿಂದಲೂ ಸಹ ಅವರು ನಮ್ಮನ್ನು ನೋಡಿಕೊಳ್ಳುತ್ತಿದ್ದರು. ನನ್ನ ತಂದೆ ಹಣ ಕೊಟ್ಟ ಬಗ್ಗೆ ನನ್ನ ತಾಯಿ ಮತ್ತು ಶಿವಪ್ರಕಾಶ್ ಹೇಳುತ್ತಿದ್ದರು. ನಾವು ಚಿಕ್ಕವರಿದ್ದಾಗಿನಿಂದಲೂ ಆ ಬಗ್ಗೆ ಹೇಳುತ್ತಿದ್ದರು. ನನಗೆ 18 ವರ್ಷಗಳಾದ ಬಳಿಕ ಆ ಬಗ್ಗೆ ನಮಗೆ ಸಂಪೂರ್ಣವಾಗಿ ಗೊತ್ತಾಗಿತ್ತು. ನನ್ನ ತಂದೆ ದುಡಿದ ಹಣದಿಂದ ಮತ್ತು ಅವರ ಆಸ್ತಿಯಿಂದ ಬಂದ ಆದಾಯದಿಂದ ಶಿವಪ್ರಕಾಶ್ ಇವರಿಗೆ ಹಣ ಕೊಟ್ಟಿದ್ದರು. ನನ್ನ ತಂದೆಯ ಸ್ವಂತ ಊರು ಅಂತರಸಂತೆ. ನನ್ನ ತಂದೆ ಆಸ್ತಿಯನ್ನು ಮಾರಾಟ ಮಾಡಿದ ಬಗ್ಗೆ ಗೊತ್ತಿಲ್ಲ. ನನ್ನ ತಂದೆಗೆ ಎರಡು ಕಿಡ್ನಿಗಳು ಹಾಳಾಗಿದ್ದರಿಂದ ಅವರಿಗೆ ಚಿಕಿತ್ಸೆಗೆ ಸಾಕಷ್ಟು ಹಣ ಖರ್ಚಾಗಿದ್ದರಿಂದ ಆ ಕಾಲಕ್ಕೆ ನನ್ನ ತಂದೆಗೆ ಶಿವಪ್ರಕಾಶ್ ಇವರಿಗೆ ಹಣ ಕೊಡಲು ಶಕ್ತಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮರಣಹೊಂದಿದಾಗ ನಾನು, ನನ್ನ ಅಕ್ಕ ಮತ್ತು ತಮ್ಮ ವಿದ್ಯಾಭ್ಯಾಸ ಮಾಡುತ್ತಿದ್ದೇವು ಎಂದರೆ ನಿಜ. ನನ್ನ ತಂದೆ ಮರಣಹೊಂದಿದ ಬಳಿಕ ನಮ್ಮ ಕುಟುಂಬಕ್ಕೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಆ ಕಾಲಕ್ಕೆ ನನ್ನ ತಾಯಿ ಕುಚ್ಚು ಹಾಕುತ್ತಿದ್ದರು.

ನಮ್ಮ ಅಜ್ಜಿ ಮತ್ತು ಮಾವ ಊರಿನಿಂದ ದಿನಸಿ ಕಳುಹಿಸುತ್ತಿದ್ದರು. ಶಿವಪ್ರಕಾಶ್ ಇವರೇ ನಮ್ಮ ಎಲ್ಲಾ ಖರ್ಚು ವೆಚ್ಚಗಳನ್ನು ಭರಿಸುತ್ತಿದ್ದರು ಎಂದರೆ ಸ್ವಲ್ಪ ಸ್ವಲ್ಪ ನೋಡಿಕೊಂಡಿರಬಹುದು.

2. ನನ್ನ ಅಕ್ಕನ ಮದುವೆ ಅಶ್ವಿನಿ ಛತ್ರದಲ್ಲಿ ಆಗಿತ್ತು. ನನ್ನ ಅಕ್ಕನ ಮದುವೆಗೆ 500-600 ಜನ ಬಂದಿರಬಹುದು. ನನ್ನ ಅಕ್ಕನ ಮದುವೆ 2014 ರಲ್ಲಿ ಆಗಿತ್ತು. ನನ್ನ ತಂದೆ ಶಿವಪ್ರಕಾಶ್ ಇವರಿಗೆ ಕೊಟ್ಟಿದ್ದಾರೆ ಎಂದು ಹೇಳುವ 4 ಲಕ್ಷ ರೂಪಾಯಿ ಹಣ ನಮ್ಮ ವಿದ್ಯಾಭ್ಯಾಸ ಮತ್ತು ನನ್ನ ಅಕ್ಕನ ಮದುವೆಗೆ ಸಾಕಾಗಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಅಕ್ಕ ಶ್ರೀಕಾಂತ ಶಾಲೆಯಲ್ಲಿ ಓದಿದ್ದು ಅದು ಸರ್ಕಾರಿ ಶಾಲೆಯಾಗಿದೆ. ಆ ಕಾಲಕ್ಕೆ ಅದು ಸರ್ಕಾರಿ ಶಾಲೆಯಾಗಿರಲಿಲ್ಲ ಎಂದರೆ ಸರಿಯಲ್ಲ. ಅಗ್ರಹಾರದಲ್ಲಿ ನಾವು ವಾಸವಿದ್ದ ಮನೆಯನ್ನು 2 ಲಕ್ಷ 75 ಸಾವಿರಕ್ಕೆ ಬೋಗ್ಯಕ್ಕೆ ಪಡೆದಿದ್ದೆವು. ಶಿವಪ್ರಕಾಶ್ ಇವರು ನನ್ನ ಅಕ್ಕನ ಮದುವೆ ಕಾಲಕ್ಕೆ ಎಷ್ಟು ಹಣ ಖರ್ಚು ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಶಿವಪ್ರಕಾಶ್ ಇವರೇ ಮುಂದೆ ನಿಂತು ಮದುವೆ ಮಾಡಿದ್ದರು ಎಂದರೆ ನಿಜ. ನನ್ನ ಅಕ್ಕನ ಮದುವೆಗೆ ಎಷ್ಟು ಖರ್ಚಾಗಿದೆ ಎಂದು ನನಗೆ ಗೊತ್ತಿಲ್ಲ. ಶಿವಪ್ರಕಾಶ್ ಇವರು ನಂಜಪ್ಪ ಇವರಿಂದ ಎಷ್ಟು ಹಣಕ್ಕೆ ನಿವೇಶನ ಖರೀದಿ ಮಾಡಿದ್ದರು ಎಂದು ಗೊತ್ತಿಲ್ಲ. 2018-19 ರಲ್ಲಿ ಆ ನಿವೇಶನದ ಬೆಲೆ 20-25 ಲಕ್ಷ ಎಂದರೆ ನನಗೆ ಗೊತ್ತಿಲ್ಲ. ಶ್ರೀನಗರದ ಪೂರ್ತಿ ನಿವೇಶನದಲ್ಲಿ ಮನೆ ಕಟ್ಟಿದ್ದೇರೆ ಎಂದರೆ ನಿಜ. ಆ ಮನೆ ಕಟ್ಟಲು ಎಷ್ಟು ಖರ್ಚಾಗಿದೆ ಎಂದು ಗೊತ್ತಿಲ್ಲ. ಆ ಮನೆ ಕಟ್ಟಲು ಸಹ ಶಿವಪ್ರಕಾಶ್ ಇವರೇ ಹಣ ಖರ್ಚು ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ಮನೆ ಕಟ್ಟಲು ನಾನು, ನನ್ನ ತಮ್ಮ ಮತ್ತು ನನ್ನ ಗಂಡ ಸ್ವಲ್ಪ ಸ್ವಲ್ಪ ಹಣ ಕೊಟ್ಟಿದ್ದೇವೆ ಆದರೆ ಒಟ್ಟು ಎಷ್ಟು ಖರ್ಚಾಗಿದೆ ಎಂದು ಗೊತ್ತಿಲ್ಲ. ನಾನು ಹಣ ಕೊಟ್ಟ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ.

3. ದಿಃ21.10.2021 ರಂದು ರಾತ್ರಿ 10.15 ಕ್ಕೆ ನಾನು ನಾಯ್ಡುನಗರದ ನನ್ನ ಮನೆಯಲ್ಲಿ ಇದ್ದೆ. ಆ ಕಾಲಕ್ಕೆ ನನ್ನ ಗಂಡ ತಿಂಡಿ ತರಲು ಅಂಗಡಿಗೆ ಹೋಗಿದ್ದರು. ಆ ಕಾಲಕ್ಕೆ ನನ್ನ ತಮ್ಮನೇ ನನಗೆ ಫೋನ್ ಮಾಡಿ ಮಾತನಾಡಿದ್ದ. ಅಷ್ಟರಲ್ಲಿ ನನ್ನ ಗಂಡ ಬಂದಿದ್ದರು. ಆ ಕೂಡಲೇ ನಾವು ಬೈಕ್ ನಲ್ಲಿ ನನ್ನ ತಾಯಿಯ ಮನೆ ಬಳಿ ಹೋಗಿದ್ದೆವು. ಅಲ್ಲಿಗೆ ಹೋಗಲು 25 ನಿಮಿಷ ಆಗಿತ್ತು. ಸತೀಶ್ ಇವರು ಎಸ್.ಬಿ.ಐ ಬ್ಯಾಂಕ್ ನಲ್ಲಿ ಕೆಲಸ ಮಾಡುತ್ತಿದ್ದು ನಾವು ಅಲ್ಲಿಯೇ ಸಾಲ ಪಡೆದಿದ್ದರಿಂದ ಅವರ ಫೋನ್ ನಂಬರ್ ನಮ್ಮ ಬಳಿ ಇತ್ತು. ನಾನು ನಮ್ಮ ತಾಯಿಯ ಮನೆ ಬಳಿ ಹೋದಾಗ ನನ್ನ ಅಕ್ಕ ಮತ್ತು ಭಾವ ನಾಗಾರ್ಜುನನನ್ನು ಕಾರಿನಲ್ಲಿ ಕೂರಿಸಿಕೊಂಡು ನಮ್ಮ ಮನೆಯ ಬಳಿ ಇರುವ ಟರ್ನಿಂಗ್ ಬಳಿ ನಿಂತಿದ್ದರು. ಆ ಕಾಲಕ್ಕೆ 5 ನಿಮಿಷ ಅಲ್ಲಿ ನಿಲ್ಲಿಸಿದ್ದರು. ಆ ಕಾಲಕ್ಕೆ ನಾಗಾರ್ಜುನ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಕೇಳಿದ್ದಕ್ಕೆ ಉತ್ತರ ಕೊಡುತ್ತಿದ್ದ. ನಾವು ಹೋದಾಗ ಅಲ್ಲಿ ಪೋಲೀಸರು ಮಾತ್ರ ಇದ್ದರು ಆದರೆ ಬೇರೆ ಜನರು ಇರಲಿಲ್ಲ. ಆ ಕಾಲಕ್ಕೆ ನನ್ನ ತಾಯಿ ಮತ್ತು ಶಿವಪ್ರಕಾಶ್ ಇವರು ಬಿದಿದ್ದ ಸ್ಥಳಕ್ಕೆ ನಮ್ಮನ್ನು ಬಿಟ್ಟಿರಲಿಲ್ಲ ಎಂದರೆ ಹತ್ತಿರಕ್ಕೆ ಬಿಟ್ಟಿರಲಿಲ್ಲ ಆದರೆ ದೂರದಿಂದ ನೋಡಿದ್ದೆ.

4. ಆ ದಿನ ರಾತ್ರಿ ನನ್ನ ತಾಯಿ ಮತ್ತು ಶಿವಪ್ರಕಾಶ್ ಇವರಿಗೆ ಸಾಗರ್ ನೇ ಹೊಡೆದಿದ್ದ ಎಂದು ನನ್ನ ತಮ್ಮನ ಹೇಳಿಕೆ ಆದಾರದ ಮೇಲೆ ಹೇಳುತ್ತಿದ್ದೇನೆ ಎಂದರೆ ನಿಜ. ಆ ದಿನ ನನ್ನ ತಮ್ಮ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಮತ್ತು ನನಗೆ ಏನನ್ನು ಹೇಳಿಲ್ಲ ಎಂದರೆ ಸರಿಯಲ್ಲ. ಆ ದಿನ ನಾನು ಕಾಮಾಕ್ಷಿ ಆಸ್ಪತ್ರೆ ಬಳಿ ಹೋಗಿರಲಿಲ್ಲ ಎಂದರೆ ನಿಜ. ಆ ದಿನ ರಾತ್ರಿ ಪೂರ್ತಿ ನಾನು ನನ್ನ ತಾಯಿ ಮನೆ ಬಳಿ ಇದ್ದೆ. ರಾತ್ರಿಯೇ ನನ್ನ ತಾಯಿ ಮತ್ತು ಶಿವಪ್ರಕಾಶ್ ಇವರ ಶವಗಳನ್ನು ಅಲ್ಲಿಂದ ತೆಗೆದುಕೊಂಡು ಹೋಗಿದ್ದರು ಆದರೆ ಆಗ ಸಮಯ ಎಷ್ಟಾಗಿತ್ತು ಎಂದು

ಗೊತ್ತಿಲ್ಲ. ಸಾಗರ್ ನನ್ನು ಈ ಮೊದಲು ಶಿವಪ್ರಕಾಶ್ ಇವರೇ ಪೋಟೋದಲ್ಲಿ ತೋರಿಸಿದ್ದರು ಮತ್ತು 2–3 ಬಾರಿ ನೇರವಾಗಿ ತೋರಿಸಿದ್ದರು. ಆದರೆ ನಾನು ಸಾಗರ್ ನನ್ನು ಯಾವತ್ತು ಮಾತನಾಡಿಸಿರಲಿಲ್ಲ. ನಾನು, ನನ್ನ ತಾಯಿ ಮತ್ತು ಶಿವಪ್ರಕಾಶ್ ಶಿವಪ್ರಕಾಶ್ ಇವರ ತೋಟಕ್ಕೆ ಹೋಗಿದ್ದೆವು ಎಂದರೆ ಸರಿಯಲ್ಲ. ನಾವು ಹಲವಾರು ಟ್ರಿಪ್ ಗೆ ಹೋಗಿದ್ದೆವು ಎಂದರೆ ನಿಜ. ಈಗ ನಾನು ನೋಡುತ್ತಿರುವ ಪೋಟೊ ನಾನು, ನನ್ನ ತಾಯಿ ಮತ್ತು ಶಿವಪ್ರಕಾಶ್ ನಂಜನಗೂಡಿಗೆ ಹೋದಾಗ ತೆಗೆದ ಪೋಟೋ ಇದೆ. ಸಾಕ್ಷಿ ಒಪ್ಪಿದ್ದರಿಂದ ಪೋಟೋವನ್ನು ನಿ.ಡಿ–5 ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಪೋಟೊ ನಾನು, ನನ್ನ ತಾಯಿ ಮತ್ತು ಶಿವಪ್ರಕಾಶ್ ಮೇಲುಕೋಟೆಗೆ ಹೋದಾಗ ತೆಗೆದ ಪೋಟೋ ಇದೆ. ಸಾಕ್ಷಿ ಒಪ್ಪಿದ್ದರಿಂದ ಪೋಟೋವನ್ನು ನಿ.ಡಿ–6 ಎಂದು ಗುರುತಿಸಿದೆ.

5. ಶಿವಪ್ರಕಾಶ್ ಇವರು ನಮ್ಮ ಮನೆಗೆ ಬರುವುದು ಹೋಗುವುದು ಅವರ ಕುಟುಂಬದವರಿಗೆ ಗೊತ್ತಿತ್ತು ಎಂದು ನನಗೆ ಶಿವಪ್ರಕಾಶ್ ಅವರೇ ಹೇಳಿದ್ದರು. ಶಿವಪ್ರಕಾಶ್ ಇವರು ಹಣಕಾಸಿನ ವಿಚಾರಕ್ಕೆ ಅವರ ಮನೆಯಲ್ಲಿ ಜಗಳ ಆಗುತ್ತಿದ್ದ ಬಗ್ಗೆ ಹೇಳಿದಾಗ ನಾನು ಕೆಲವೊಮ್ಮೆ ಅವರಿಗೆ ನಮ್ಮ ಮನೆಗೆ ಬರಬೇಡಿ ಎಂದು ಹೇಳಿದ್ದೇನೆ. ಆ ಬಗ್ಗೆ ಶಿವಪ್ರಕಾಶ್ ಇವರು ಸಾಯುವ 2–3 ತಿಂಗಳ ಮುಂಚೆ ನನಗೆ ಹೇಳಿದ್ದರು. ಶಿವಪ್ರಕಾಶ್ ಇವರ ಹೆಂಡತಿ ಮಕ್ಕಳು ಯಾವತ್ತು ನಮ್ಮ ಮನೆ ಮುಂದೆ ಗಲಾಟೆ ಮಾಡಿಲ್ಲ ಎಂದರೆ ನಿಜ. ಶಿವಪ್ರಕಾಶ್ ಇವರ ಕುಟುಂಬದಲ್ಲಿ ನಡೆಯುತ್ತಿದ್ದ ಜಗಳದ ಬಗ್ಗೆ ನನಗೆ ಪ್ರತ್ಯಕ್ಷವಾಗಿ ಗೊತ್ತಿಲ್ಲ ಎಂದರೆ ನಿಜ. ಆ ಘಟನೆ ದಿನ ಒಂದು ಬಾರಿ ಮತ್ತು ಒಂದು ಬಾರಿ ಪೋ.ಠಾಣೆಯಲ್ಲಿ ಪೋಲೀಸರು ನನ್ನ ವಿಚಾರಣೆ ಮಾಡಿದ್ದಾರೆ. ಆ ಘಟನೆ ಆಗಿ ಒಂದು ವಾರದ ಬಳಿಕ ಪೋ.ಠಾಣೆಗೆ ಹೋಗಿದ್ದೆ. ನಾನು ಪೋಲೀಸರ ಮುಂದೆ ಯಾವುದೇ

ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆ ದಿನ ಸಾಗರ್ ಅಲ್ಲಿಗೆ ಬಂದಿದ್ದ ಮತ್ತು ಘಟನೆ ಬಳಿಕ ಮಚ್ಚನ್ನು ಡಿಯೋ ಸ್ಕೂಟರ್ ನಲ್ಲಿ ಇಟ್ಟುಕೊಂಡು ಹೋಗಿದ್ದ ಎಂದು ನನ್ನ ತಮ್ಮ ಹೇಳಿದ್ದರಿಂದ ಹೇಳುತ್ತಿದ್ದೇನೆ ಎಂದರೆ ನಿಜ. ನನಗೆ ಈ ಪ್ರಕರಣದ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
***ಮೈಸೂರು***